# ಕನವರಿಕೆ

ಆಕಾಶದಿಂದ ಸೆರಗು ಇಳಿಬಿಟ್ಟಳು
ಪಾತಾಳದಿಂದ ಕೈ ಚಾಚಿದಳು
ಮರ ಹತ್ತಿ ಪ್ರೇಮಗೀತೆ ಹಾಡಿದಳು
ಅವಳ ವರ್ಣರಂಜಿತ ಕ್ರಿಯೆ
ನನ್ನ ಮೆತ್ತುವಂತೆ ನಡೆಯಲಿಲ್ಲ

ಹಕ್ಕಿಯಾಗು ಆದರೆ ಹಾರಬೇಡ ಅಂದಳು
ನದಿಯಾಗು ಆದರೆ ಹರಿಯಬೇಡ ಅಂದಳು
ಬಳ್ಳಿಯಾಗು ಆದರೆ ಹಬ್ಬಬೇಡ ಅಂದಳು
ಅವಳ ವಿಶಿಷ್ಟ ರಂಜನೀಯ ಆಟ
ಹಾವಿನ ವಿಷದ ಹಲ್ಲು ಕಿತ್ತಹಾಗೆ
ಮತ್ತು ಆ ವಿಷವನ್ನು ನಿರುಮ್ಮಳವಾಗಿ
ತಾನೇ ಇಂಗಿಸಿಕೊಂಡ ಹಾಗೆ

ತೀರಾ ಗದರುತ್ತಾಳೆ– ಸುಮ್ಮನೆ ಕೇಳಬೇಕು
ತೀರಾ ಮುದ್ದಾಡುತ್ತಾಳೆ– ಸುಮ್ಮನೆ
ತೆಗೆದುಕೊಳ್ಳಬೇಕು
ತೀರಾ ಒದೆಯುತ್ತಾಳೆ– ಸುಮ್ಮನೆ ತಿನ್ನಬೇಕು
ತೀರಾ ಅಳುತ್ತಾಳೆ– ಸುಮ್ಮನೆ ನೋಡಬೇಕು
ಅವಳ ಪ್ರಯೋಗದಲ್ಲಿ ನಾನು ಧುಮುಕುವಂತಿಲ್ಲ

ಆದರೆ ಪ್ರೀತಿಗೆ ಗುರುತು ನೆಡುತ್ತಾ ಹೋದರೆ
ಆಕಾಶ ಏರುವಳು ಆದರೆ ಸೆರಗು ಇಳಿಬಿಡುವುದಿಲ್ಲ
ಪಾತಾಳ ಸೇರುವಳು ಆದರೆ ಕೈ ಚಾಚುವುದಿಲ್ಲ
ಮರ ಹತ್ತುವಳು ಆದರೆ ಪ್ರೇಮಗೀತೆ ಹಾಡುವುದಿಲ್ಲ

● **ಅಕ್ಷಯ ಕಾಂತಬೈಲು**

